ತಮ್ಮ ಜ್ಯೋತಿಯನ್ನು ಬೇರೊಂದು ಶಾಲೆಯಲ್ಲಿ ಪ್ರಾಮಾಣಿಕವಾಗಿ ಬೆಳಗುತ್ತಿದ್ದರೊ ಏನೊ? ಕೈಯಿಗೆ ಬಳೆ ಹಾಕ್ಕೆಂಡು ಕೊಡವಿರೆ ಹೋಗುತ್ತ ಎಂದು ಹಲ್ಲು ಕಚ್ಚಿಕೊಂಡು ಕಳೆದ ಹತ್ತು ವರ್ಷದಿಂದ ತಮಗೆ ಬಂದಂತೆ ಕೆಲಸ ಮಾಡಿಕೊಂಡಿದ್ದರು. ಈಗ್ಗೆ ಬೇರೊಂದು ಶಾಲೆಯಿಂದ ವರ್ಗವಾಗಿ ಬಂದ ವಸಂತ ಮೇಡಮ್ ಈ ಶಾಲೆಯ ಬಗೆಗೆ ಅಷ್ಟಲ್ಲದಿದ್ದರೂ ಒಂದಿಷ್ಟು ಗೊತ್ತಿದ್ದೇ ಬಂದಿದ್ದರು. ವಸಂತ ಮೇಡಮ್ ಮುಖ್ಯಶಿಕ್ಷಕಿಯಾಗಿ ಬಂದ ನಂತರ ಏನಾದರೂ ಮಾಡಿ ಶಾಲೆಯ ದಾಖಲಾತಿಯನ್ನು ಮತ್ತು ಹಾಜರಾತಿಯನ್ನು ಹೆಚ್ಚಿಸಿಕೊಳ್ಳಬೇಕೆಂದು ಶತ ಪ್ರಯತ್ನಮಾಡತೊಡಗಿದರು. ಇದರ ನಿಮಿತ್ತವಾಗಿ ಮಕ್ಕಳನ್ನು ಹುಡುಕಿಕೊಂಡು ಆ ಬೀದಿ ಈ ಬೀದಿ ಸುತ್ತುವಾಗ ಇವರಿಗೆ ತಿಳಿದುಬಂದದ್ದೇನೆಂದರೆ, ಹಿಂದೆ ಶಾಲೆಗಳೇ ಇಲ್ಲದ ಕಾಲದಲ್ಲಿ, ಬಹುಶಃ ಸರ್ಕಾರ ಆಗಷ್ಟೆ ಶಿಕ್ಷಣದ ಅಗತ್ಯವನ್ನು ಮನಗಂಡು ಎಲ್ಲೆಲ್ಲಿ ಮಠ ಮಂದಿರಗಳು ಇರುತ್ತವೋ ಅಲ್ಲೆಲ್ಲ ಎಲ್.ಎಸ್. ಪಾಸು ಮಾಡಿದ್ದ ಸ್ಥಳೀಯರನ್ನು ಮೇಷ್ಟ್ರುಗಳನ್ನಾಗಿ ನೇಮಿಸಿ ಶಿಕ್ಷಣ ಪ್ರಾರಂಭಿಸುತ್ತಿದ್ದ ಕಾಲದಲ್ಲಿ ಸರ್ಕಾರಕ್ಕೆ ಅಂಥಹ ತನುವಿರುವ ಜಾಗವಾಗಿ ಈ ಕೈಲಾಸಪ್ಪನ ಮಠ ಕಂಡಿತ್ತು.

ಆರಕ್ಕೇರದ ಮೂರಕ್ಕಿಳಿಯದ ಜಾತಿಯವರಿರುವ ಕೈಲಾಸಪ್ಪನ ಮಠದಲ್ಲಿ ಸದ್ಯಕ್ಕೆ ಶಾಲೆ ನಡೆಯುತ್ತಿರಲಿ, ದೇಶ ಆರ್ಥಿಕವಾಗಿ ಸಧೃಢವಾದಂತೆಲ್ಲ ಕೊಠಡಿ ಇತ್ಯಾದಿ ಹೊಂದಿಸೋಣವೆಂದು ಮಠದ ಆಡಳಿತ ಮಂಡಳಿಯವರ ಒಪ್ಪಿಗೆ ಪಡೆದೇ ಶಾಲೆ ಶುರುಮಾಡಿದರು. ಈ ಆಡಳಿತ ಮಂಡಳಿಯವರಿಗೆ ಬಹುಶಃ ಮೊದಲಿಗೆ ಗೊತ್ತಿರಲಿಲ್ಲ ಅನಿಸುತ್ತೆ, ಕಳೆದೋಗಿರುವ ಅಕ್ಷರ ಹುಡುಕಿಕೊಂಡು ಹಟ್ಟಿ ಹುಡುಗರೂ ಇತ್ತ ಒಬ್ಬೊಬ್ಬರಾಗೆ ಬರಬಹುದೆಂದು.

ಅದರಂತೆ ಅಲ್ಲೊಬ್ಬ ಇಲ್ಲೊಂದು ಅಂಬೇಡ್ಕರ್ ಕಾಲೋನಿಯ ಹುಡುಗರು ಸ್ಲೇಟು ಬಳಪ ಹಿಡಿದುಕೊಂಡು ಕೈಲಾಸಪ್ಪನ ಮಠದ ಕಡೆಗೆ ಧಾವಿಸತೊಡಗಿದರು. ಇದನ್ನು ನಿರೀಕ್ಷಿಸದಿದ್ದ ಮಠದವರು ಈ ಮಕ್ಕಳನ್ನು ದೂರದಲ್ಲಿ ನೋಡಿಯೇ ಮಠದ ಬಾಗಿಲು ದೂಡಿಕೊಳ್ಳುತ್ತಿದ್ದರಂತೆ. ಇಲಾಖೆಯವರು ಕೈಕಾಲು ಹಿಡಿದ ಮೇಲೆ ಮಠದ ದ್ವಾರಬಾಗಿಲಿನಿಂದ ಆಚೆ ಕುಳಿತು ಕಲಿಯಲು ಅವಕಾಶ ಮಾಡಿಕೊಟ್ಟರಂತೆ. ಅದರಂತೆ ಕಾಲೋನಿ ಮಕ್ಕಳು ಒಳಮಕ್ಕೆ ದೂರದಲ್ಲಿ ಕಾಣುತ್ತಿದ್ದ ಅಕ್ಷರವನ್ನು ಇಣುಕಿ ನೋಡಿ ಹೊರಗಿನಿಂದಲೇ ತಿದ್ದುತ್ತಿದ್ದರಂತೆ. ಮಠಕ್ಕೆ ಬರುತ್ತಿದ್ದ ಭಕ್ತರ ಕಾಲಿಗೆ ಈ ಮಕ್ಕಳು ತೊಡರುತ್ತಿದ್ದುದರಿಂದ ಭಕ್ತಾದಿಗಳು ಬೇಸರಪಟ್ಟುಕೊಂಡು ಆಡಳಿತ ಮಂಡಳಿಯವರಿಗೆ ಈ ಅನಾಚಾರದ ಬಗ್ಗೆ ದೂರುತ್ತಿದ್ದರಂತೆ. ಈ ಅಸಹ್ಯದ ಬಗ್ಗೆ ಉತ್ತರ ನೀಡುವುದು ಕಷ್ಟವಾದ ನಂತರ ಇದಕ್ಕೆ ಪರಿಹಾರವಾಗಿ ಅವರಿರುವ ಕಾಲೋನಿಯಲ್ಲೆ ಶಾಲೆಯೊಂದನ್ನು ತೆರೆದು ಹಟ್ಟಿ ಮಕ್ಕಳು ಇತ್ತ ಬಾರದಂತೆ ತಡೆಗೋಡೆ ನಿರ್ಮಿಸಬೇಕು ಎಂದು ಈ ನಡುವಂತರದ ಜಾತಿಯವರು ಮನವಿ ಸಲ್ಲಿಸಿದ್ದರ ಪರಿಣಾಮ ಅಥವ ಕೃಪೆಯಿಂದಲೇ, ಇಲಾಖೆಯ ಅಧಿಕಾರಿಗಳು ಅಂಬೇಡ್ಕರ್ ಕಾಲೋನಿಯ ಯಾರದೋ ಒಂದು ದನದ ಕೊಟ್ಟಿಗೆಯಲ್ಲಿ ಪಾಠ ನಡೆಯಲಿಕ್ಕೆ ವ್ಯವಸ್ಥೆ ಕಲ್ಪಿಸಿದುದಂತೆ. ಹೀಗೆ ದುರುದ್ದೇಶದಿಂದ ಶುರುವಾದ ಶಾಲೆಯೇ ನಂತರ ಮಣ್ಣಿನ ಗೋಡೆ ಎದ್ದು, ಅದಕ್ಕೆ ಹೆಂಚು ತೊಡಿಸಿ, ಕಾಲಾನಂತರ ಅದನ್ನು ಕಿತ್ತು ಶೀಟ್ ಹಾಕಿ ಈಗ ನಾಲ್ಕು ರೂಮಿರುವ ಥಾರ್ಸಿ ಕೊಠಡಿಯಲ್ಲಿ ನಡೆಯುತ್ತಿರುವ ಮಾದರಿ ಶಾಲೆಯಾಗಿದೆ.

ಈ ಶಾಲೆಗಿರುವ ಈ ಐತಿಹಾಸಿಕ ದುರುದ್ದೇಶದ ಮಹತ್ವವನ್ನು ಅರಿತಿದ್ದರಿಂದಲೇ ವಸಂತ ಮೇಡಮ್ ಏನಾದರೂ ಮಾಡಿ ಈ ಶಾಲೆ ಇಡೀ ನಗರಕ್ಕೇ ಮಾದರಿಯಾಗುವಂತೆ ಮಾಡಬೇಕೆಂಬ ಹಠಕ್ಕೆ ಬಿದ್ದಿರುವಂತ್ತಿತ್ತು. ಆದ್ದರಿಂದಲೇ ತನ್ನ ಸಹಪಾಠಿ ಜ್ಯೋತಿ ಮೇಡಮ್ ಕೊಟ್ಟ 'ಈ ಹಟ್ಟಿ ಜನುಕ್ಕೆ ಎಷ್ಟು ಮಾಡಿರು ಅಷ್ಟೆಯ, ತೀರ ತಲೆಕೆಡಿಸಿಕೊಳ್ಳಬಾರದು, ನಮ್ದು ಎಷ್ಟೈತ ಅಷ್ಟನ್ನ ನೋಡಿಕೊಂಡು ಹೋಗಬೇಕು' ಎಂಬ ಸಲಹೆಯನ್ನು ಬದಿಗೊತ್ತಿ ತನ್ನ ಕೈಲಾದ ಸಾಹಸಗಳಿಗೆ ಇಳಿದಿದ್ದರು. ಈ ಮಾದಿರ್ ಶಾಲೆಯಲ್ಲಿ ಊರು ಅಥವ ಹಟ್ಟಿಯಲ್ಲಿ ಸುಳ್ಳೆಪಟ್ಟಿಗೆ ಎಲ್ಲಾದರೂ ವಾಲಗದ ಅಥವ ತಮಟೆಯ ಸದ್ದಾದರೂ ಸಾಕು ದೇವರು ಅದು ಇದು ಎಂದು ವಾರಾನುಗಟ್ಟಲೆ ಶಾಲೆಕಡೆ ಮಖ ಹಾಕದ ಮಕ್ಕಳಿದ್ದರು. ಲೆಕ್ಕಕ್ಕೆ ದಾಖಲಾತಿ ನೂರಿಪ್ಪತ್ತು ಇದ್ದರೂ ದೈನಂದಿನ ಹಾಜರಾತಿ ಮಾತ್ರ ಐವತ್ತನ್ನ ದಾಟುತ್ತಿರಲಿಲ್ಲ. ಅದೂ